ಸಂತಸವಾಗಿತ್ತು ಅಂದರೆ ಅಪರೂಪಕ್ಕೆ ಇಬ್ಬರೇ ಮನೆಯಲ್ಲಿರಬೇಕಾದ ಸಂದರ್ಭವನ್ನು ನವದಂಪತಿ ಸದುಪಯೋಗಪಡಿಸಿಕೊಂಡು ನಲಿದಿದ್ದರು. ಇಬ್ಬರೂ ಬ್ಯಾಂಕಿಗೆ ರಜಾ ಹಾಕಿದ್ದು ಅತ್ತೆಗೆ ಗೊತ್ತಾದರೆ ಅವರ ಕೈಗೆ ಪೊರಕೆ ಬರುತ್ತೆ ಎಂದು ಚೇಷ್ಟೆ ಮಾಡಿದ್ದಳು ಕಸ್ತೂರಿ.

"ನಮ್ಮಮ್ಮ ಅಂತವರೇನಲ್ಲ..." ವಹಿಸಿಕೊಂಡಿದ್ದ ಪ್ರಿಯ ಪುತ್ರ.

ಇನ್ನೊಮ್ಮೆ ಇಂತದೇ ಘಟನೆ ನಡೆಯಿತು. ಕಸ್ತೂರಿಯ ಮನಸ್ಸಲ್ಲಿ ಸಂಶಯದ ಬೀಜ ಬಿತ್ತು. ಈ ಮನೆಯವರಿಗೆ ತಲೆಕೂದಲಿನಷ್ಟು ಬಳಗ ಅನ್ನುವುದಲ್ಲದೆ ಅದನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಬರುತ್ತಿದ್ದಾರೆ ಎಂದು ಅಷ್ಟರಲ್ಲಾಗಲೇ ಕಸ್ತೂರಿಗೆ ಅರಿವಾಗಿಬಿಟ್ಟಿತ್ತು. ಹೊರಡುವ ಹಿಂದಿನ ದಿನ ಸುವರ್ಣ ಹೇಳಿದ್ದರು,

"ಈ ಹುಡುಗಂಗೆ ಟೆಸ್ಟ್ ಇದೆ ಅಂತಿದಾನೆ. ತಪ್ಪಿಸೋ ಹಾಗಿಲ್ಲ. ಖುಷಿಖುಷಿಯಾಗಿ ಎಲ್ಲಿಗೆ ಹೊರಟ್ರೂ ಏನೋ ಒಂದು ಅಡ್ಡಿ ಇದ್ದೇ ಇರುತ್ತೆ..."

ಅಮ್ಮನಾದವಳು ಮಗನ ಜವಾಬ್ದಾರಿ ವಹಿಸಬೇಕಾದ್ದು ಸಹಜ. ಸ್ವಾಭಾವಿಕ. ಆದರೆ ಊರಿಗೆ ಮುಂಚೆ ಹೊರಟು ನಿಂತಿದ್ದ ಚಂಪಕಾ ಹೇಳಿದ್ದಳು,

"ನನ್ನ ಪೈಕಿಯೋರ ಮದುವೆ. ನಾನಂತೂ ಹೋಗ್ಲೇಬೇಕು."

"ನಾನು ನೋಡ್ಕೋತೀನಿ..." ಎಂದು ಕಸ್ತೂರಿ ಹೇಳಬೇಕಾಗಿರಲಿಲ್ಲ. ಹೇಳಿಬಿಟ್ಟಿದ್ದಳು. ಯಾಕೆ ಹೇಳಿದ್ದು? ಇಂತಾ ಸಂದರ್ಭಗಳಿಂದ ತಪ್ಪಿಸಿಕೊಳ್ಳಲೆಳಸುವ ಅವಳ ಸಹಜ ಸ್ವಭಾವದಿಂದಲೋ ಅಥವಾ ಅತ್ತೆ ತನ್ನ ಬರುವಿಕೆಯನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುವುದಿಲ್ಲ ಎನ್ನುವ ಸಂದೇಹದಿಂದಲೋ? ಈ ಸಂದೇಹ ಕೆಣಕಿದ ಸ್ವಾಭಿಮಾನದಿಂದಲೋ? ಸಕಾರಣ ಅವಳಿಗೆ ಗೊತ್ತಿಲ್ಲ. ಆದರೆ ಯಾರಿಗಾಗಿ ಅವಳು ಮನೆಯಲ್ಲಿರುತ್ತೇನೆ ಎನ್ನುವ ಮಾತಾಡಿದ್ದಳೋ ಆ ಹುಡುಗ ಮರುದಿನ ಮನಸ್ಸು ಬದಲಾಯಿಸಿ ಮನೆಯವರ ಜೊತೆ ಕುಣಿಯುತ್ತಾ ಹೊರಟಿದ್ದ.

"ಟೆಸ್ಟು ಗಿಸ್ಟು ಯಾವಾಗ್ಲೂ ಇರುತ್ತೆ ಬಿಡು. ಪಾಪ, ಆಸೆ ಮಾಡುತ್ತೆ..." ಎಂದು ಮುಕ್ತ ಪರವಾನಿಗೆ ಕೊಟ್ಟಿದ್ದರು ಅತ್ತೆ. ರಾಜೀವ ಆ ಸಲ ತಪ್ಪಿಸಿಕೊಳ್ಳುವಂತಿರಲಿಲ್ಲ. ಮದುಮಗ ಅವನ ಆಪ್ತ ಗೆಳೆಯ. ಕಸ್ತೂರಿ ಒಬ್ಬಳೇ ಮನೆಯಲ್ಲಿ ಉಳಿದುಕೊಂಡಿದ್ದಳು. ಮನಸ್ಸು ಕಹಿಯಾಗಿತ್ತು. ಗಟ್ಟಿಯೂ ಆಗಿತ್ತು. ಈ ಮನೆಯ ಹೆಣ್ಣುಮಕ್ಕಳ ದೃಷ್ಟಿಯಲ್ಲಿ ಬದುಕು ಅಂದರೆ ಸೀರೆ, ಒಡವೆ, ತಿರುಗಾಟ, ಮೆರೆದಾಟ ಇಂತವೇ ಇರಬಹುದು. 'ಎಂಜಾಯ್ ಮಾಡುವುದು' ಎನ್ನುವುದಕ್ಕೆ ಅವರ ಪದಕೋಶದಲ್ಲಿ ಇದೇ ಅರ್ಥ ಇರಬಹುದು. ಅಷ್ಟು ಮಾತ್ರವಾ? ಅಲ್ಲ, ಅಲ್ಲ. 'ಸೌಂದರ್ಯ ಪ್ರಜ್ಞೆ' ಅನ್ನುವುದು ಅತ್ತೆಯಲ್ಲಿ ಅದೆಷ್ಟು ರಕ್ತಗತವಾಗಿಬಿಟ್ಟಿದೆ ಅಂದರೆ ಬಾಹ್ಯ ಸೌಂದರ್ಯಕ್ಕೆ ಅವರು ವಿಪರೀತದ ಪ್ರಾಶಸ್ತ್ಯ ಕೊಡುವುದನ್ನು ರೂಢಿಸಿಕೊಂಡು ಬಿಟ್ಟಿದ್ದಾರೆ. ಹಿರಿಮಗನಿಗೆ ಹುಡುಗಿ ಹುಡುಕಬೇಕಾದರೆ ಅವರು ಆಕಾಶ, ಪಾತಾಳ ಒಂದು ಮಾಡಿದ್ದರು ಎನ್ನುವುದನ್ನು ಒಮ್ಮೆ ರಸವತ್ತಾಗಿ ವರ್ಣಿಸಿದ್ದ ರಾಜೀವ. ಅದಕ್ಕೆ ತಕ್ಕಂತೆ ರಾಜೀವನ ಅಣ್ಣ ಮನೋಜ ಕೈತುಂಬಾ ಸಂಬಳ ಎಣಿಸುವ ಸಾಫ್ಟ್‌ವೇರ್ ಎಂಜಿನಿಯರ್ ಎನ್ನುವ ಕೋಡು. 'ಮದುವೆ' ಅನ್ನುವುದು ಅವರ ದೃಷ್ಟಿಯಲ್ಲಿ ಮುಂದಿನ ಪೀಳಿಗೆಗಳ ವರೆಗೆ ದೃಷ್ಟಿಯಲ್ಲಿಟ್ಟುಕೊಳ್ಳಬೇಕಾದ ಒಂದು ವ್ಯವಸ್ಥೆ. ಜೋಡಿ ಚೆನ್ನಾಗಿದ್ದರೆ ಅವರಿಗೆ ಹುಟ್ಟುವ ಮಕ್ಕಳು ಚೆನ್ನಾಗಿರುತ್ತಾರೆ. ಯಾವ ಕುಂದಿಲ್ಲದೆ ನಡೆದುಕೊಂಡು ಬರುತ್ತದೆ ವಂಶಾವಳಿ. ಸುವರ್ಣನ ಗಂಡ ಅವರನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಎಂತಾ ಗುಂಪಿನಲ್ಲೂ ಎದ್ದು ಕಾಣುವ ಅವರ ಚಂದವೇ ಕಾರಣ ಎನ್ನುವುದು ಇವತ್ತಿಗೂ ಅವರ ಹೆಮ್ಮೆ. ಗಂಡ, ಹೆಂಡತಿ ಇಬ್ಬರೂ ಜನ ತಿರುಗಿ ನೋಡುವಷ್ಟು ರೂಪವಂತರಾಗಿದ್ದರಿಂದ ಅವರ ಮೂರು ಮಕ್ಕಳೂ ಒಬ್ಬರಿಗಿಂತಾ ಒಬ್ಬರು ರೂಪದಲ್ಲಿ ಮಿಗಿಲು. ಮಗಳು ಯೋಗ್ಯವಯಸ್ಕಳಾಗುತ್ತಿದ್ದಂತೆ ಈ ಮನೆಯ ಸಂಬಂಧ ಅರಸಿಕೊಂಡು ಬರುತ್ತಿದ್ದವರ